ನಾವೇ ಬರುತ್ತೇವೆ. ಈ ಉಧೋ ಎನ್ನುವ ಕಾಲಕ್ಕೆ ಇದನ್ನೆಲ್ಲಾ ಏಕೆ ಹಚ್ಚಿಕೊಳ್ಳುವುದಕ್ಕೆ ಹೋಗುತ್ತೀರಿ? ಈಗ ಇರುವುದು ಜನರ ಮುಂದೆ ಹೋಗುವುದು, ವಿವರಿಸಿ ಹೇಳಬೇಕು, ಮಾಡಬೇಕು. ಅದನ್ನು ಇಟ್ಟುಕೊಂಡು ಈ ಕೊಳೆ, ಈ ಪಾಪ, ಈ ಅನ್ಯಾಯವನ್ನು ಕಾನೂನು ಮುಖಾಂತರ ನೀವು ಮಾಡಿಟ್ಟು ಹೋಗುವುದು ಇದೆಯಲ್ಲಾ, ಇದು ದುರಂತವಾಗುತ್ತದೆ. ಅತ್ಯಂತ ದೊಡ್ಡ ಕೆಟ್ಟ ಕೆಲಸವೂ ಕೂಡ ಆಗುತ್ತದೆ. ದಯವಿಟ್ಟು ಈ ಮಸೂದೆಯನ್ನು ವಾಪಸ್ ತೆಗೆದುಕೊಳ್ಳಿ. ಬೇಕಾದರೆ ನಿಮಗೇನಾದರೂ ಸಾಧಕ-ಬಾಧಕಗಳು ವಿಚಾರ ಮಾಡಬೇಕಾದರೆ ಆಗ ಸೆಲೆಕ್ಟ್ ಕಮಿಟಿಗೆ ಪಹಿಸಿದರೆ ನಿಮ್ಮಲ್ಲಿ ಎಲ್ಲರೂ ಕುಳಿತುಕೊಂಡು ವಿಚಾರ ಮಾಡೋಣ. ಅನೇಕರು ಟೌನ್‌ನಲ್ಲಿ ಕೆಲಸ ಮಾಡಿರುವವರು ಇದ್ದಾರೆ, ಮಂತ್ರಿಯಾಗಿ ಕೆಲಸ ಮಾಡಿರುವವರು ಎಲ್ಲಾ ಇದ್ದಾರೆ. ಬುದ್ಧಿವಂತರೆಲ್ಲಾ ಸೇರಿಕೊಂಡು ಸ್ವಲ್ಪ ಆಲೋಚನೆ ಮಾಡಿ ಇದರ ಸಾಧಕ-ಬಾಧಕವನ್ನು ನೋಡೋಣ. ಒಟ್ಟಾರೆ ನನ್ನ ಅಭಿಪ್ರಾಯವೇನೆಂದರೆ ನಾವು ಈಗ ಹೊಸ ಯುಗಕ್ಕೆ ಹೋಗುತ್ತಿದ್ದೇವೆ. ಹೊಸ ವಿಚಾರಗಳು ಬರಬೇಕಾಗಿದೆ. ಆಲೋಚನೆಗಳು ಬರಬೇಕಾಗಿದೆ. ಬೆಳವಣಿಗೆಯಲ್ಲಿ, ಚಿಂತನೆಯಲ್ಲಿ ನಡಿಗೆಯಲ್ಲಿ, ಆಲೋಚನೆಯಲ್ಲಿ ಹೋಗುತ್ತಿದ್ದೇವೆ. ಅದಕ್ಕನುಗುಣವಾಗಿ ನಮ್ಮ ಕಾನೂನುಗಳು ನಮ್ಮ ಹೆಜ್ಜೆಗಳು ಮುಂದುವರಿಯಬೇಕಾಗುತ್ತದೆ. ಅದನ್ನು ಮರೆತು ನಾವೇನಾದರೂ ಈ ಕಾಲದಲ್ಲಿ ತಪ್ಪು ಹೆಜ್ಜೆಗಳನ್ನು ಇಟ್ಟರೆ ನಾಳೆ ಮುಂದಿನ ಜನಾಂಗ ನಮ್ಮನ್ನೆಲ್ಲಾ ಶಪಿಸಬೇಕಾದಂಥ ಸಂದರ್ಭ ಬರುತ್ತದೆ. ಈ ಇತಿಹಾಸದ ದೋಷಕ್ಕೆ ನೀವು ದಯವಿಟ್ಟು ಗುರಿಯಾಗಬೇಡಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಈ ಒಂದು ಮಸೂದೆಯನ್ನು ಈಸದನ ತಿರಸ್ಕರಿಸಬೇಕೆಂದು ನಾನು ಅತ್ಯಂತ ಕಳಕಳಿಯಿಂದ ಕೇಳುತ್ತೇನೆ. ಆ ಕಡೆ ಕುಳಿತಂಥ ಅನೇಕ ಮಾನ್ಯ ಮಿತ್ರರಿಗೂ, ಮಾನ್ಯ ಸದಸ್ಯರಿಗೂ ಕೂಡ ವಿನಂತಿ ಮಾಡುತ್ತೇನೆ. ದಯವಿಟ್ಟು ಇದೇನು ಈ ಮಸೂದೆ ತಮ್ಮ ಪಾರ್ಟಿಯಲ್ಲಿ ಚರ್ಚೆಯಾಗಿದೆಯೋ ಇಲ್ಲವೋ ಗೊತ್ತಿಲ್ಲ. ದಯವಿಟ್ಟು ಸರ್ಕಾರ ಇದನ್ನು ತಂದಿದೆ ಎನ್ನುವ ಕಾರಣಕ್ಕಾಗಿ ತಾವು ಒಪ್ಪಿಗೆ ಕೊಡಬಾರದು ಎನ್ನುವ ಕಳಕಳಿಯ ಮನವಿಯನ್ನು ತಮ್ಮೆಲ್ಲರಲ್ಲೂ ಮಾಡಿಕೊಂಡು ಈ ಮಸೂದೆಯನ್ನು ತಿರಸ್ಕರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

10. ಪ್ರಕಟಣೆ

ಅಧ್ಯಕ್ಷರು : ಮಾನ್ಯ ದಿವಾಕರ್‌ಬಾಬು, ಯೋಗೇಶ್‌ಭಟ್‌ರವರೇ ಸದನ ಕಲಾಪಗಳ ಸಮಿತಿ ಈಗ ಸಭೆ ಸೇರಿತ್ತು. ಈ ಮಸೂದೆ ವಿಚಾರಕ್ಕೆ ಈಗ ಆತುರ ಪಡುವುದು ಬೇಡ ಎಂದು ಹೇಳಿ ಎಲ್ಲರೂ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಅದನ್ನೇನೂ ಪರ್ಯಾಲೋಚನೆಗೆ, ಅಂಗೀಕಾರಕ್ಕೆ ನಾವು ತೆಗೆದುಕೊಳ್ಳುವುದಿಲ್ಲ. ಅದರ ಚರ್ಚೆ ಮಾಡುವುದು ಬೇಡ. ಅದು ಬಂದಾಗ ನೀವು ಪಾರ್ಟಿಸಿಪೇಟ್ ಮಾಡಬಹುದು. ಅದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುತ್ತಾ ಇಲ್ಲ. ಕೈ ಬಿಟ್ಟಿದ್ದೇವೆ. ಅದರಿಂದ ಚರ್ಚೆ ಅನಗತ್ಯವಾಗುತ್ತದೆ. ಸದನ ಕಲಾಪಗಳ ಸಮಿತಿಯಲ್ಲಿ ನಾವು ಒಂದು ನಿರ್ಣಯಕ್ಕೆ ಬಂದಿದ್ದೇವೆ. ಈಗ ಪಂಚಾಯತ್‌ರಾಜ್ ಬಿಲ್ಲನ್ನು ತೆಗೆದುಕೊಳ್ಳೋಣ.